# ಮಾತೃಸ್ಮೃತಿ

ಮೂಲ ಬಂಗಾಳಿ : **ಜಿತೇಂದ್ರಕುಮಾರ ಸಾಹಾ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಜಿತೇಂದ್ರಕುಮಾರ ಸಾಹಾ ಅವರ ಮನೆ ಇಂದಿನ ಬಾಂಗ್ಲಾದೇಶದ ಮೈಮನ್‌ಸಿಂಗ್ ಜಲ್ಲೆಯ ಖೂಪಿಪಾರಾ ಗ್ರಾಮದಲ್ಲಿತ್ತು. ಮುಂದೆ ಅವರು ಪಶ್ಚಿಮಬಂಗಾಳದ ನವದ್ವೀಪಕ್ಕೆ ಬಂದರು. ೧೮೯೮ರಲ್ಲಿ ಹುಟ್ಟಿದ ಅವರು ೧೯೯೪ರಲ್ಲಿ, ೯೬ನೇ ವಯಸ್ಸಿನಲ್ಲಿ ತೀರಿಕೊಂಡರು. *(– ಸಂ.)*

ಆಗ ನಾನು (೧೯೧೯ರಲ್ಲಿ) ೨೧ನೇ ವರ್ಷ ವಯಸ್ಸಿನ ಯುವಕನಾಗಿದ್ದೆ. ಹಠಾತ್ತಾನೆ ಒಂದು ದಿನ ನನ್ನ ಸ್ನೇಹಿತ ಮನ್ಮಥ ರಾಯ್‌ನ ಪತ್ರ ಬಂತು: ''ಬೇಗನೆ ಬಂದು ಬಿಡು. ಶ್ರೀಮಾತೆಯವರ ಬಳಿಗೆ ಹೋಗಬೇಕು.'' ಆಗ ಶ್ರೀಮಾತೆಯವರು ಕೋಯಲ್‌ಪಾರಾದ ಜಗದಂಬಾ ಆಶ್ರಮದಲ್ಲಿದ್ದರು.

ಆಗ ಚೈತ್ರಮಾಸ. ಎಲ್ಲೆಡೆ ಹರಡಿದ್ದ ಬಿಸಿಲಿನಲ್ಲಿ ಗಾಡಿ ಮಾಡಿಕೊಂಡು, ಮಧ್ಯಾಹ್ನದ ಹೊತ್ತಿಗೆ ಕೋಯಲ್‌ಪಾರಾ ಆಶ್ರಮದ ಮುಂದೆ ನಾಲ್ಕು ಜನ ಸ್ನೇಹಿತರು ಬಂದಿಳಿದೆವು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ಕೇಶವಾನಂದರು ನಮ್ಮನ್ನು ಪ್ರಶ್ನಿಸಿದರು– ''ನಿಮ್ಮೆಲ್ಲರ ಮನೆ ಪೂರ್ವಬಂಗಾಳದಲ್ಲಿ, ಅಲ್ಲವೆ?'' ಅದಕ್ಕೆ ನಾವು ''ಹೌದು'' ಎಂದೆವು. ಮಹಾರಾಜ್ ಹೇಳಿದರು, ''ಶ್ರೀಮಾತೆಯವರು ಎಲ್ಲರಿಗೂ ಹೇಳಿದ್ದರು, 'ಪೂರ್ವಬಂಗಾಳದ ನನ್ನ ಕೆಲವು ಮಂದಿ ಮಕ್ಕಳು ಬರುತ್ತಾರೆ. ಅವರಿಗೆ ಮೀನು ಎಂದರೆ ಬಾರಿ ಇಷ್ಟ. ಅವರಿಗಾಗಿ ಒಂದಿಷ್ಟು ಮೀನು ಸಂಗ್ರಹ ಮಾಡಿ ತಂದುಬಿಡಿ' ಅಂತ.''

ಈ ಹಿಂದೆ ಶ್ರೀಮಾತೆಯವರಿಗೆ ನಮ್ಮ ಪರಿಚಯವಿರಲಿಲ್ಲ. ಶ್ರೀಮಾತೆಯವರ ಬಗ್ಗೆ ತಿಳಿದಿದ್ದರೂ, ನಾವು ಆಶ್ರಮಕ್ಕೆ ಹೋಗಿರಲಿಲ್ಲ. ಹಾಗಿದ್ದರೂ ಅವರಿಗೆ ನಾವು ಅಲ್ಲಿಗೆ ಹೋಗುವುದು ಗೊತ್ತಾಗಿತ್ತು! ವಿದೇಶದಿಂದ ಬಹಳ ದಿನಗಳ ನಂತರ ಮಗನು ಮರಳಿ ಮನೆಗೆ ಬಂದಾಗ ತಾಯಿಯಾದವಳು ಯಾವ ರೀತಿ ಅತಿಶಯವಾದ ಆನಂದಕ್ಕೆ ಒಳಗಾಗುವಳೋ, ಅದೇ ರೀತಿ ಶ್ರೀಮಾತೆಯವರು ನಾವು ಬಂದಿರುವ ವಾರ್ತೆಯನ್ನು ಕೇಳಿ ಅತ್ಯಂತ ಮಮತೆಯಿಂದ ಕೇಶವಾನಂದ ಮಹಾರಾಜರಿಗೆ ಹೇಳಿದ್ದರು: ''ಅವರು ತುಂಬ ಕಷ್ಟದಿಂದ ಬಂದಿದ್ದಾರೆ. ಅವರಿಗೋಸ್ಕರ ಒಂದಿಷ್ಟು ಹಾಲು, ಸಕ್ಕರೆ, ರವೆ ಇವನ್ನು ಕೊಂಡುಕೊಂಡು ಬಾ. ನಾನು ಅಡುಗೆ ಮಾಡಿ ಬಡಿಸುತ್ತೇನೆ.'' ಅಂತಹ ಅಸಾಧ್ಯ ಬಿಸಿಲಿನ ಬೇಗೆಯಲ್ಲಿ ಶ್ರೀಮಾತೆಯವರು ಒಲೆಯ ಬೆಂಕಿಯ ಬೇಗೆಯನ್ನೂ ಲೆಕ್ಕಿಸದೆ, ಅವರ ಮಕ್ಕಳಾದ ನಮಗಾಗಿ ಪಿಠೇ ಪಾಯಸವನ್ನು ತಯಾರು ಮಾಡಿ ಆಶ್ರಮಕ್ಕೆ ಕಳುಹಿಸಿಕೊಟ್ಟರು. ಸಮೀಪದಲ್ಲೇ ಇದ್ದ ಜಗದಾಂಬಾ ಆಶ್ರಮದಲ್ಲಿ ಶ್ರೀಮಾತೆಯವರು ತಂಗಿದ್ದರು. ಅಂದು ನಮಗೆ ಶ್ರೀಮಾತೆಯವರ ದರ್ಶನವಾಗಲಿಲ್ಲ. ಕೇಶವಾನಂದ ಮಹಾರಾಜ್ ಹೇಳಿದರು: ''ನಾಳೆ



ಬೆಳಿಗ್ಗೆ ನೀವು ದರ್ಶನ ಮಾಡಬಹುದು.'' ನಾವು ದೀಕ್ಷೆ ಪಡೆದುಕೊಳ್ಳುವ ಬಯಕೆಯಿಂದ ಬಂದಿದ್ದೇವೆ ಎಂದು ಹೇಳಿದಾಗ ಅವರೆಂದರು, ''ಇಂದೇ ಕೆಲವರು ಹುಡುಗರು ಮರಳಿ ಹೋದರು. ಶ್ರೀಮಾತೆಯವರು ದೀಕ್ಷೆ ನೀಡಲಿಲ್ಲ – ಕ್ಷೇತ್ರ ಇತ್ಯಾದಿ ಸರಿ ಹೊಂದಲಿಲ್ಲ ಎಂಬ ಕಾರಣಕ್ಕಾಗಿ.'' ಈ ಮಾತು ಕೇಳಿ ನಾನು ತುಸು ಚಿಂತಿಸತೊಡಗಿದೆ. ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ ಶೌರ್ಯೇಂದ್ರನಾಥ ಮಜುಂದಾರ್ ಅವರು ಅಲ್ಲೇ ಇದ್ದರು. ಅವರು ಧೈರ್ಯ ತುಂಬಿದರು: ''ಶ್ರೀಮಾತೆಯವರನ್ನೇ ಪ್ರಾರ್ಥಿಸಿಕೋ. ಎಲ್ಲವೂ ಸರಿಯಾಗಿ ಬಿಡುವುದು.''

ನನಗೆ ರಾತ್ರಿಯೆಲ್ಲ ನಿದ್ದೆಯಿಲ್ಲ. ಒಂದೇ ಚಿಂತೆ – ರಾತ್ರಿ ಕಳೆದು ಬೆಳಗಾದರೆ ಶ್ರೀಮಾತೆ ಏನು ಹೇಳುವರೋ! ನನಗೆ

ದೀಕ್ಷೆಯಾಗುವುದೋ ಇಲ್ಲವೋ? ಬೆಳಗಿನ ಹೊತ್ತು ದಾರಿ ಹೋಕರು ಕೂಗಿ ಕರೆಯಲು ಆರಂಭಿಸಿದರು. ಮಹಾರಾಜ್ ಬಂದು ಹೇಳಿದರು: ''ನೀವೆಲ್ಲ ಎದ್ದೇಳಿ. ಸ್ನಾನ ಮಾಡಿ ಎಲ್ಲರೂ ತಯಾರಾಗಿ. ಇಲ್ಲದಿದ್ದರೆ, ಶ್ರೀಮಾತೆಯವರು ಕರೆದಾಗ ಮತ್ತೆ ಸಮಯ ಸಿಗಲಾರದು.'' ಮಹಾರಾಜ್ ಹೇಳಿದಂತೆಯೇ ನಾವು ಆಶ್ರಮದ ಪಕ್ಕದಲ್ಲೇ ಇದ್ದ ಕೊಳದಲ್ಲಿ ಸ್ನಾನ ಮಾಡಿ, ಶುಭ್ರ ಮನಸ್ಸಿನಿಂದ ಆ ದಿವ್ಯಕ್ಷಣಕ್ಕಾಗಿ ಕಾಯುತ್ತಾ ನಿಂತೆವು. ನಮ್ಮ ಅತೀವ ಬಯಕೆಯ ಆ ಕರೆಗಾಗಿ ನಾವು ಕಾದೆವು. ಕೊನೆಗೂ ಎಲ್ಲ ದ್ವಂದ್ವಕ್ಕೆ, ಇಬ್ಬಗೆಯ ಭಾವಕ್ಕೆ ತೆರೆ ಬಿತ್ತು. ಆ ಕರೆ ಬಂದೇಬಿಟ್ಟಿತು. ಶ್ರೀಮಾತೆಯವರು ದೇವರಕೋಣೆಯಲ್ಲಿ ಪೂಜೆ ಮುಗಿಸಿ, ಆಸನದಲ್ಲಿ ಕುಳಿತಿದ್ದರು. ದೇವಾಲಯದಲ್ಲಿ ಭಕ್ತಿಯೇ ಮೂರ್ತಿವೆತ್ತಂತೆ ಅವರು ಕುಳಿತಿದ್ದರು. ಅವರಿಗೆ ಪ್ರಣಾಮ ಮಾಡುತ್ತಿದ್ದಂತೆಯೇ ಅವರು ಕೇಳಿದರು:

''ನಿನಗೆ ಯಾವ ಮಂತ್ರ ಇಷ್ಟ?''

ನಾನೆಂದೆ: ''ನನಗೆ ಗೊತ್ತಿಲ್ಲ. ನಿಮ್ಮ ಬಳಿಗೆ ಬಂದಿದ್ದೇನೆ – ನೀವು ಯಾವ ಮಂತ್ರವನ್ನು ಕೊಡುತ್ತೀರೋ ಅದರಿಂದಲೇ ನನಗೆ ಮಂಗಳವಾಗುತ್ತದೆ; ಅದರಿಂದಲೇ ನನಗೆ ಒಳ್ಳೆಯದಾಗುತ್ತದೆ.''

ಶ್ರೀಮಾತೆ ಹೇಳಿದರು: ''ನಿಮ್ಮ ಕುಲದ ಮಂತ್ರ – ವೈಷ್ಣವ ಮಂತ್ರ. ವೈಷ್ಣವ ಮಂತ್ರವನ್ನೇ ಪಡೆದುಕೋ.'' ದೀಕ್ಷೆ ಪಡೆದದ್ದಾಯಿತು. ದೀಕ್ಷೆಗೆ ಮೊದಲು ನಮ್ಮ ಕುಲದ ಮಂತ್ರ ಯಾವುದೆಂದು ನನಗೆ ಗೊತ್ತಿರಲಿಲ್ಲ. ಅತ್ಯಂತ ತೃಪ್ತಿಯಿಂದ ನಾನು ಎರಡು ದಿನಗಳ ನಂತರ ಮನೆಗೆ ಮರಳಿದೆ. ಮನೆಗೆ ಬಂದ ನಂತರ, ನಮ್ಮ ಕುಲದ ಮಂತ್ರವು ವೈಷ್ಣವ ಮಂತ್ರವೇ ಆಗಿತ್ತೆಂದು ನಾನು ಕೇಳಿದೆ. ಶ್ರೀಮಾತೆಯವರು ಅಂತರ್ಯಾಮಿನಿ ಎಂಬುದು ನನಗರ್ಥವಾಯಿತು.

ನನ್ನ ಕೈಬೆರಳುಗಳು ಶುದ್ಧವಾದ ಜಪ ಮಾಡಲು ಯೋಗ್ಯವಲ್ಲ ಎಂದು ಯಾರೋ ಒಬ್ಬರು ಹೇಳಿದ್ದರು. ಆದ್ದರಿಂದ ಇಷ್ಟದೇವತೆಯ ಮಂತ್ರಜಪ ಮಾಡಲು ನನ್ನ ಮನಸ್ಸಿನಲ್ಲಿ ಬಹಳ ದ್ವಂದ್ವವುಂಟಾಗುತ್ತಿತ್ತು. ಶ್ರೀಮಾತೆಯವರು ಅನುಮತಿ ನೀಡಿದರೆ ಜಪಮಾಲೆಯಲ್ಲೇ ಜಪ ಮಾಡುವೆ ಎಂದು ನಾನು ಭಾವಿಸಿದೆ. ಇದನ್ನು ತಿಳಿಸಿ ಶ್ರೀಮಾತೆಯವರಿಗೆ ಪತ್ರ ಬರೆದೆ – ಜಪಮಾಲೆಯಲ್ಲಿ ಮಂತ್ರ ಜಪ ಮಾಡಬಹುದೇ ಎಂದು. ಮಾಡಬಹುದಾಗಿದ್ದರೆ, ಯಾವ ಮಾಲೆಯಲ್ಲಿ ಇಷ್ಟಮಂತ್ರದ ಜಪ ಮಾಡಲಿ, ಎಂದೂ ಕೇಳಿದ್ದೆ.

ತನ್ನ ಮಕ್ಕಳು ದೂರದಲ್ಲಿರಲಿ, ಸಮೀಪದಲ್ಲಿರಲಿ – ತಾಯಿ ಅವರ ಮಾತನ್ನು ಕೇಳಿಸಿಕೊಳ್ಳಬಲ್ಲರು – ಅವರೇ ಅಲ್ಲವೆ ತಾಯಿ ಎಂದರೆ? ಅದು ಪೌರ್ಣಮಿಯ ರಾತ್ರಿ. ಬೆಳದಿಂಗಳು ಭೂದೇವಿಯ ವಕ್ಷಸ್ಥಳವನ್ನೆಲ್ಲ ವ್ಯಾಪಿಸಿಕೊಂಡಿತ್ತು. ನಾನು ಗಾಢ ನಿದ್ರೆಗೆ ವಶನಾಗಿದ್ದೆ. ಕನಸಿನಲ್ಲಿ ಶ್ರೀಮಾತೆ ಕಾಣಿಸಿಕೊಂಡರು. ತುಳಸೀಮಾಲೆಯೊಂದನ್ನು ಕೈಯಲ್ಲಿ ಹಿಡಿದುಕೊಂಡು, ಶ್ರೀಮಾತೆ ನನ್ನೆದುರು ನಿಂತಿದ್ದರು. ಆ ಬೆಳಕಿನ ಮಿಂಚು ನನ್ನ ನಿದ್ರೆಯನ್ನು ಭಂಗಗೊಳಿಸಿತು. ಕನಸು ಒಡೆಯಿತು. ರಾತ್ರಿ ಕೂಡ ಕಳೆಯಿತು. ಮರುದಿನವೇ ಕೇಶವಾನಂದ ಮಹಾರಾಜರ ಪತ್ರ ಬಂತು – ಶ್ರೀಮಾತೆಯವರು ನನಗೋಸ್ಕರ ತುಳಸೀಮಾಲೆಯನ್ನು ನಿಗದಿಗೊಳಿಸಿದ್ದುದಾಗಿ ಅದರಲ್ಲಿ ಬರೆದಿತ್ತು.

ನನ್ನ ಮನೆಯಲ್ಲಿ ಜಗದ್ಧಾತ್ರೀಪೂಜೆ ಮಾಡಬೇಕೆಂದು ಒಂದು ಬಾರಿ ಆಲೋಚಿಸಿದೆ. ಆಗ ಶ್ರೀಮಾತೆಯವರು ಕಾಣಿಸಿಕೊಳ್ಳಲಿಲ್ಲ. ಒಂದು ದಿನ ರಾತ್ರಿ ಕಂಡೆ–ಅವರು ಗ್ರಾಮದ ಕಾಳೀ ಮಂದಿರದ ಸಮೀಪದಲ್ಲೇ ಕುಳಿತಿದ್ದಾರೆ. ಇದ್ದಕ್ಕಿದ್ದಂತೆ ಮಂದಿರವೆಲ್ಲವೂ ಬೆಳಕಿನಿಂದ ತುಂಬಿ ಹೋಯಿತು. ನಾನು ಮಂದಿರದ ಕಾಳೀಮಾತೆಯ ಮೂರ್ತಿಯ ಕಡೆಗೇ ನೋಡುತ್ತಿದ್ದೆ. ಆ ಕ್ಷಣದಲ್ಲಿ ಆ ಕಾಳೀಮೂರ್ತಿ ಅದೃಶ್ಯವಾಗಿ, ನನ್ನೆದುರು ಸಿಂಹವಾಹಿನಿ ಜಗದ್ಧಾತ್ರೀ ಮೂರ್ತಿ ಕಾಣಿಸಿಕೊಂಡಿತು. ಈಗ ಆ ಮೂರ್ತಿ ಕೂಡ ಅದೃಶ್ಯವಾಯಿತು. ಬಳಿಕ ನಾನು ಶ್ರೀಮಾತೆಯವರ ಮೂರ್ತಿಯನ್ನು ಕಂಡೆ. ಅನಂತರ ನಾನು ಮತ್ತೊಮ್ಮೆ ಅದೇ ಕಾಳೀಮೂರ್ತಿ, ಜಗದ್ಧಾತ್ರೀ ಮೂರ್ತಿಯನ್ನು ಕಂಡೆ. ಆಗ ನನಗರ್ಥವಾಯಿತು. ಯಾರು ಜಗದ್ಧಾತ್ರಿಯೋ, ಅವಳೇ ಕಾಳಿ, ಅವಳೇ ಶ್ರೀಮಾತೆ ಶಾರದಾದೇವಿಯವರು – ಎಂದು.

## ಮುಗ್ಧ ಭಕ್ತಿ

ರಸಿಕಲಾಲನೆಂಬ ಕಸ ಗುಡಿಸುವವನು ದಕ್ಷಿಣೇಶ್ವರದಲ್ಲಿ ಕೆಲಸ ಮಾಡುತ್ತಿದ್ದ. ಶ್ರೀರಾಮಕೃಷ್ಣರು ನೀಡುತ್ತಿದ್ದ ಉಪದೇಶಗಳನ್ನು ಕೇಳುವ ಭಾಗ್ಯ ಅವನಿಗಿರಲಿಲ್ಲ. ಆದರೆ ಅವನು ಶ್ರೀರಾಮಕೃಷ್ಣರು ನಡೆದಾಡುತ್ತಿದ್ದ ಸ್ಥಳವನ್ನೆಲ್ಲ ಗುಡಿಸಿ ಸ್ವಚ್ಛಗೊಳಿಸುತ್ತಿದ್ದ, ಹಾಗೂ ದೂರದಿಂದ ಅವರಿಗೆ ಕೈಮುಗಿದು ನಮಸ್ಕರಿಸುತ್ತಿದ್ದ. ಒಂದುದಿನ ಅವನನ್ನು ಬಳಿಗೆ ಕರೆದ ಶ್ರೀರಾಮಕೃಷ್ಣರು ಕೇಳಿದರು, ''ನಿನಗೇನು ಬೇಕು? ಹೇಳು.'' ಅವನು ಅವರ ಪಾದಗಳಿಗೆ ನಮಸ್ಕರಿಸಿ, ''ನನ್ನ ಕೊನೆಯ ದಿನಗಳಲ್ಲಿ ನೀವು ನನಗೆ ದಾರಿ ತೋರಿಸಿಕೊಡಬೇಕು'' ಎಂದ. ''ಆಗಲಿ'' ಎಂದರು ಶ್ರೀರಾಮಕೃಷ್ಣರು.

ಶ್ರೀರಾಮಕೃಷ್ಣರ ಮಹಾಸಮಾಧಿಯಾಗಿ ಅನೇಕ ವರ್ಷಗಳು ಕಳೆದಿದ್ದವು. ರಸಿಕಲಾಲ ತನ್ನ ಕೊನೆಯ ದಿನಗಳಲ್ಲಿ ಶ್ರೀರಾಮಕೃಷ್ಣರ ದರ್ಶನ ಪಡೆದ. ಅವನ ಸುತ್ತ ನೆರೆದಿದ್ದವರೆಲ್ಲ ಆನಂದದಿಂದ ಬೆಳಗುತ್ತಿದ್ದ ಅವನ ಮುಖವನ್ನು ಕಂಡರು. 'ಶ್ರೀ ರಾಮಕೃಷ್ಣ' ಎಂದು ಜಪಿಸುತ್ತ ರಸಿಕಲಾಲ ಕೊನೆಯುಸಿರೆಳೆದ.